**ಕರ್ನಾಟಕ ವಿಧಾನ ಪರಿಷತ್ತು**

| | |
|---|---|
| ಸದಸ್ಯರ ಹೆಸರು | ಶ್ರೀ ಸಿ. ಎನ್ ಮಂಜೇಗೌಡ<br>(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 187 (191) |
| ಉತ್ತರಿಸಬೇಕಾದ ದಿನಾಂಕ | 12.08.2025 |
| ಉತ್ತರಿಸಬೇಕಾದವರು | ಮಾನ್ಯ ನಗರಾಭಿವೃದ್ಧಿ ಹಾಗೂ ನಗರ ಯೋಜನೆ ಸಚಿವರು |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಮೈಸೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ನಿವೇಶನ ಮಂಜೂರಾತಿ ಕೋರಿ ಬಂದಂತಹ ಅರ್ಜಿಗಳ ಪೈಕಿ ಸುಮಾರು 70 ಸಾವಿರ ಅರ್ಜಿಗಳು ಪ್ರಾಧಿಕಾರದಲ್ಲಿ ಬಾಕಿ ಉಳಿದಿದ್ದು, ಈ ಅರ್ಜಿಗಳಿಂದ ಪ್ರಾಧಿಕಾರಕ್ಕೆ ಬಂದಂತಹ ಹಣ ಎಷ್ಟು; | ಮೈಸೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ನಿವೇಶನ ಕೋರಿ 2011ರಲ್ಲಿ ಹಾಗೂ 2017ರಲ್ಲಿ ಅರ್ಜಿ ಆಹ್ವಾನಿಸಲಾಗಿತ್ತು. ಈ ಪೈಕಿ 2011ರಲ್ಲಿ 82652 ಅರ್ಜಿಗಳು ಸ್ವೀಕೃತವಾಗಿದ್ದು, ಇವುಗಳಿಂದ ಒಟ್ಟು ರೂ. 265,11,58,755/- (ರೂ. ಇನ್ನೂರ ಅರವತ್ತೈದು ಕೋಟಿ ಹನ್ನೊಂದು ಲಕ್ಷದ ಐವತ್ತೆಂಟು ಸಾವಿರದ ಏಳುನೂರ ಐವತ್ತೈದು ಮಾತ್ರ) ಗಳು ಸ್ವೀಕೃತವಾಗಿರುತ್ತದೆ.<br><br>2017 ನೇ ಸಾಲಿನಲ್ಲಿ 32959 ಅರ್ಜಿಗಳು ಸ್ವೀಕೃವಾಗಿದ್ದು, ಇವುಗಳಿಂದ ಒಟ್ಟು ರೂ. 117,57,42,096/- (ರೂ. ನೂರ ಹದಿನೇಳು ಕೋಟಿ ಐವತ್ತೇಳು ಲಕ್ಷದ ನಲವತ್ತೆರಡು ಸಾವಿರದ ತೊಂಭತ್ತಾರು ಮಾತ್ರ) ಸ್ವೀಕೃತವಾಗಿರುತ್ತದೆ.<br><br>ಸದರಿ ಅರ್ಜಿಗಳಿಂದ ಪ್ರಾಧಿಕಾರಕ್ಕೆ ಒಟ್ಟು ರೂ.382,69,00,851/- ಗಳು (ಮುನ್ನೂರ ಎಂಭತ್ತೆರಡು ಕೋಟಿ ಅರವತ್ತೊಂಬತ್ತು ಲಕ್ಷದ ಎಂಟನೂರ ಐವತ್ತೊಂದು ರೂಪಾಯಿಗಳು ಮಾತ್ರ) ಸ್ವೀಕೃತವಾಗಿರುತ್ತದೆ. |
| ಆ) | ಅರ್ಜಿ ಹಾಕಿದವರಿಗೆ ಯಾವ ಕಾಲಮಿತಿಯೊಳಗೆ ನಿವೇಶನ ಹಂಚಿಕೆ ಮಾಡಲು ಕ್ರಮ ಕೈಗೊಳ್ಳಲಾಗುವುದು? | ಪ್ರಾಧಿಕಾರದಿಂದ ನಿವೇಶನಕ್ಕೆ ಅರ್ಜಿ ಆಹ್ವಾನಿಸಿದಾಗ, ಸಾರ್ವಜನಿಕರಿಂದ ಸ್ವೀಕೃತವಾಗುವ ಅರ್ಜಿಗಳೊಂದಿಗೆ, ಈ ಹಿಂದೆ ಅರ್ಜಿದಾರರು ನಿವೇಶನ ಕೋರಿ ಸಲ್ಲಿಸಿರುವ ಅರ್ಜಿಗಳನ್ನು ಪರಿಗಣಿಸಿ, ಅರ್ಜಿದಾರರ ಜ್ಯೇಷ್ಠತೆ ಆಧಾರದ ಮೇಲೆ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರ (ನಿವೇಶನಗಳ ಹಂಚಿಕೆ) ನಿಯಮಗಳು 1991 ರಂತೆ ಪರಿಶೀಲಿಸಿ ನಿವೇಶನ ಹಂಚಿಕೆ ಮಾಡಲು ಕ್ರಮಕ್ಕೈಗೊಳ್ಳಲಾಗುವುದು.<br><br>ಮುಂದುವರೆದು ಬಾಕಿ ಉಳಿದಿರುವ ಅರ್ಜಿಗಳಿಗೆ ಪ್ರಾಧಿಕಾರದಿಂದ ನಿವೇಶನ ಹಂಚಿಕೆಗೆ ಮುಂದಿನ ಅಧಿಸೂಚನೆ ಹೊರಡಿಸಿದಾಗ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರ (ನಿವೇಶನಗಳ ಹಂಚಿಕೆ) ನಿಯಮಗಳು 1991ರಂತೆ ನಿಯಮಾನುಸಾರ ಪರಿಗಣಿಸಲಾಗುವುದು. |

ಸಂಖ್ಯೆ :ನಅಇ 370 ಮೈಅಪ್ರಾ 2025(ಇ)

**(ಬಿ.ಎಸ್ ಸುರೇಶ)**

ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು